ಹೆಣ್ಣಮಕ್ಕಳನ್ನು ಟೆನಿಸ್ ಆಟಗಾರ್ತಿಯರನ್ನಾಗಿ ಮಾಡುವ ಆಸೆ ಹೊಂದಿದ್ದ ಅವರು ಹಿರಿಯ ಮಗಳು ನವೊಮಿ ಮತ್ತು ಕಿರಿಯ ಮಗಳು ಮೇರಿ ಒಸಾಕಾ ಅವರನ್ನು ಚಿಕ್ಕವಯಸ್ಸಿನಲ್ಲೇ ಟೆನಿಸ್ ತರಬೇತಿಗೆ ಕಳುಹಿಸಿದರು. ಪ್ರಾಥಮಿಕ ಹಂತದ ತರಬೇತಿ ಮುಗಿದ ಬಳಿಕ ವಿಲಿಯಮ್ಸ್ ಸಹೋದರಿಯರ ತಂದೆ ರಿಚರ್ಡ್ ಬಳಿ ಇಬ್ಬರೂ ತರಬೇತಿಗೆ ಸೇರಿಕೊಂಡರು.

ಒಸಾಕಾ ಎಂಟು ವರ್ಷದವಳಿದ್ದಾಗ ಅವರ ಕುಟುಂಬ ಫ್ಲಾರಿಡಾಕ್ಕೆ ವಲಸೆ ಹೋಯಿತು. ಅಲ್ಲಿ ತರಬೇತಿ ಪಡೆಯಲು ಗುಣಮಟ್ಟದ ಅಂಕಣಗಳು ಹಾಗೂ ಕೋಚ್‌ಗಳು ಸಿಕ್ಕರು. 2014ರಲ್ಲಿ ಅಮೆರಿಕದಲ್ಲಿ ಹರೋಲ್ಡ್ ಸಲ್ಮೋನ್ ಅಕಾಡೆಮಿಯಲ್ಲಿ ತರಬೇತಿಗೆ ಸೇರಿಕೊಂಡ ಒಸಾಕಾ ಕೆಲ ವರ್ಷಗಳ ಬಳಿಕ ಪ್ರೊ ವರ್ಲ್ಡ್ ಟೆನಿಸ್ ಅಕಾಡೆಮಿಯಲ್ಲಿ ತರಬೇತಿ ಪಡೆದರು.

2016ರಲ್ಲಿ ಆಸ್ಟ್ರೇಲಿಯಾದಲ್ಲಿ ಮೂರು ಡಬ್ಲ್ಯುಟಿಎ ಟೂರ್ನಿಗಳಲ್ಲಿ ಉತ್ತಮ ಪ್ರದರ್ಶನ ನೀಡಿ ರ‍್ಯಾಂಕಿಂಗ್‌ನಲ್ಲಿ ಅಗ್ರ 100ರೊಳಗೆ ಸ್ಥಾನ ಗಳಿಸಿದ್ದರು. ಮಹಿಳಾ ಟೆನಿಸ್ ಸಂಸ್ಥೆಯ (ಡಬ್ಲ್ಯುಟಿಎ) ಟೂರ್ನಿಗಳಲ್ಲಿ ಒಟ್ಟು ಆರು ಪ್ರಶಸ್ತಿಗಳನ್ನು ಜಯಿಸಿ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನ ಸಂಪಾದಿಸಿದರು. ಡಬ್ಲ್ಯುಟಿಎ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನ ಪಡೆದ ಏಷ್ಯಾದ ಮೊದಲ ಆಟಗಾರ್ತಿ ಎನ್ನುವ ಗೌರವ ಕೂಡ ಅವರದ್ದಾಯಿತು. ಇದರಿಂದ 2016ರಲ್ಲಿ ಮೊದಲ ಬಾರಿಗೆ ಆಸ್ಟ್ರೇಲಿಯಾ ಓಪನ್ ಟೂರ್ನಿಯಲ್ಲಿ ಪಾಲ್ಗೊಳ್ಳಲು ಅರ್ಹತೆ ಲಭಿಸಿತು.

ಉತ್ಕೃಷ್ಟ ಸಾಧನೆಯ ಹಾದಿಯಲ್ಲಿ ಸಾಗಿದ ಒಸಾಕಾ 2014ರಲ್ಲಿ ಸ್ಟ್ಯಾನ್‌ಫೋರ್ಡ್ ಕ್ಲಾಸಿಕ್ ಟೂರ್ನಿಯಲ್ಲಿ ಅಮೆರಿಕ ಓಪನ್ ಟೂರ್ನಿಯ ಮಾಜಿ ಚಾಂಪಿಯನ್ ಆಸ್ಟ್ರೇಲಿಯಾದ ಸಮಂತ ಸೊಸರ್ ಎದುರು ಗೆಲುವು ಸಾಧಿಸಿದ್ದರು. ಆಗ ಅವರ ವಯಸ್ಸು 16! ಪ್ಯಾನ್ ಫೆಸಿಫಿಕ್ ಓಪನ್ ಡಬ್ಲ್ಯುಟಿಎ ಟೂರ್ನಿಯಲ್ಲಿ (2016ರಲ್ಲಿ) ಫೈನಲ್ ಪ್ರವೇಶಿಸುವ ಮೂಲಕ ರ‍್ಯಾಂಕಿಂಗ್‌ನಲ್ಲಿ 50ರ ಒಳಗೆ ಸ್ಥಾನ ಸಂಪಾದಿಸಿದರು. 2018ರಲ್ಲಿ ಇಂಡಿಯನ್ ವೇಲ್ಸ್ ಓಪನ್ ಟೂರ್ನಿಯಲ್ಲಿ ಪ್ರಶಸ್ತಿಗೆ ಮುತ್ತಿಕ್ಕಿದ್ದರು. ಅಮೆರಿಕದಲ್ಲಿ ತರಬೇತಿ ಪಡೆದು ಅಲ್ಲಿಯೇ ನೆಲೆಸಿದ್ದರೂ ಒಸಾಕಾ, ಜಪಾನ್ ತಂಡವನ್ನು ಪ್ರತಿನಿಧಿಸುತ್ತಿದ್ದರು.

## ಆಕ್ರಮಣಕಾರಿ ಆಟಗಾರ್ತಿ

ನವೊಮಿ, ಬೇಸ್‌ಲೈನ್ ಹೊಡೆತಗಳನ್ನು ಬಾರಿಸುವುದರಲ್ಲಿ

**ಗಂಟೆಗೆ 200 ಕಿ.ಮೀ. ವೇಗದಲ್ಲಿ ಚೆಂಡನ್ನು ಎದುರಾಳಿಯ ಅಂಕಣಕ್ಕೆ ಕಳುಹಿಸುವಷ್ಟು ಶಕ್ತಿ ಆಕೆಯ ತೋಳುಗಳಲ್ಲಿದೆ.**



ನಿಪುಣೆ. ಫೋರ್ ಹ್ಯಾಂಡ್ ಹೊಡೆತಗಳು ಮತ್ತು ಆಕ್ರಮಣಕಾರಿ ಸರ್ವ್‌ಗಳಿಗೂ ಹೆಸರುವಾಸಿ. 16ನೇ ವಯಸ್ಸಿನಲ್ಲಿ ಗಂಟೆಗೆ 160 ಕಿ.ಮೀ. ವೇಗದಲ್ಲಿ ಚೆಂಡನ್ನು ಎದುರಾಳಿಯ ಅಂಕಣಕ್ಕೆ ಕಳುಹಿಸುವಷ್ಟು ಸಾಮರ್ಥ್ಯ ಹೊಂದಿದ್ದರು. ಇವರ ವೇಗದ ಸರ್ವ್‌ಗಳು ಡಬ್ಲ್ಯುಟಿಎ ಟೂರ್ನಿಗಳಲ್ಲಿ ಈಗಲೂ ದಾಖಲೆಯಾಗಿ ಉಳಿದಿವೆ. ಮ್ಯಾರಥಾನ್ ರ‍್ಯಾಲಿಗಳಲ್ಲಿ ಮೇಲುಗೈ ಸಾಧಿಸಿ ಹೆಚ್ಚು ಅಂಕಗಳನ್ನು ಗಳಿಸುವುದು ಇವರ ಆಟದ ವೈಶಿಷ್ಟ್ಯ. ಹಲವು ಬಾರಿ ಗಂಟೆಗೆ 200 ಕಿ.ಮೀ. ವೇಗದಲ್ಲಿ ಚೆಂಡನ್ನು ಎದುರಾಳಿಯ ಅಂಕಣಕ್ಕೆ ಕಳುಹಿಸುವಷ್ಟು ಶಕ್ತಿ ಆಕೆಯ ತೋಳುಗಳಲ್ಲಿದೆ.

ಗ್ರ್ಯಾನ್ ಸ್ಲಾಂ ಟೂರ್ನಿಗಳಲ್ಲಿ ಗೆದ್ದ ಸತತ ಮೂರು ಟ್ರೋಫಿಗಳು ಜಪಾನ್ ಆಟಗಾರ್ತಿಗೆ ತಾರಾ ಪಟ್ಟ ತಂದುಕೊಟ್ಟಿವೆ. ಕಾರ್ಪೊರೇಟ್ ಕಂಪನಿಗಳ ಜಾಹೀರಾತುಗಳಲ್ಲಿಯೂ ನವೊಮಿ ಮುಂಚೂಣಿಯಲ್ಲಿದ್ದಾರೆ. ಪಂದ್ಯಗಳು, ಜಾಹೀರಾತು, ಕಂಪನಿಗಳ ಜೊತೆ ಒಪ್ಪಂದ, ರಾಯಭಾರಿ ಹೀಗೆ ವಿವಿಧ ಮೂಲಗಳಿಂದ ಈ ಆಟಗಾರ್ತಿ 2019ರಲ್ಲಿ 16 ಮಿಲಿಯನ್ ಡಾಲರ್ ಆದಾಯ ಗಳಿಸಿದ್ದಾರೆ. ಈ ವರ್ಷ ಹೆಚ್ಚು ಸಂಪಾದಿಸಿರುವ ಜಗತ್ತಿನ ಅಥ್ಲೀಟ್‌ಗಳ ಪಟ್ಟಿಯಲ್ಲಿ 29ನೇ ಸ್ಥಾನ ಹೊಂದಿದ್ದಾರೆ. ಜಪಾನ್‌ನ ಆಟೊಮೊಬೈಲ್ ಕಂಪನಿ ನಿಸಾನ್ ಮತ್ತು ಸಿಟಿಜನ್ ವಾಚ್ ಕಂಪನಿಗಳ ರಾಯಭಾರಿಯೂ ಇವರೇ.

## ಹೋರಾಟದಲ್ಲಿಯೂ ಮುಂಚೂಣಿ

ಟೆನಿಸ್ ಅಂಕಣದಲ್ಲಷ್ಟೇ ಅಲ್ಲದೆ ಸಾಮಾಜಿಕ ಹೋರಾಟಗಳಲ್ಲೂ ಒಸಾಕಾ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಅಮೆರಿಕದಲ್ಲಿ ಪೊಲೀಸ್ ವಶದಲ್ಲಿದ್ದ ಕಪ್ಪುವರ್ಣೀಯ ಜಾರ್ಜ್ ಫ್ಲಾಯ್ಡ್ ಹತ್ಯೆಯನ್ನು ಖಂಡಿಸಿ ನಡೆದ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಅನೇಕ ಕ್ರೀಡಾಪಟುಗಳು ವರ್ಣ, ಪ್ರಾಂತ್ಯದ ಹಿನ್ನೆಲೆಯಲ್ಲಿ ತಾವು ಅನುಭವಿಸಿದ ತಾರತಮ್ಯದ ವಿರುದ್ಧ 'ಬ್ಲ್ಯಾಕ್ ಲೈವ್ಸ್ ಮ್ಯಾಟರ್' ಅಭಿಯಾನ ನಡೆಸಿದ್ದರು. ಇದರಲ್ಲಿ ಒಸಾಕಾ ಕೂಡ ಭಾಗಿಯಾಗಿದ್ದರು. ಜಾರ್ಜ್ ಫ್ಲಾಯ್ಡ್ ಹತ್ಯೆ ಹಾಗೂ ಜನಾಂಗೀಯ ದೌರ್ಜನ್ಯದ ವಿರುದ್ಧ ಸಿಡಿದೆದ್ದಿದ್ದ ಅವರು ಇವನ್ನು ಖಂಡಿಸುವಂತಹ ಮಾಸ್ಕ್ ಧರಿಸಿಯೇ ಅಮೆರಿಕ ಓಪನ್ ಟೂರ್ನಿಯ ಪ್ರತಿ ಪಂದ್ಯದಲ್ಲೂ ಕಣಕ್ಕಿಳಿದಿದ್ದರು. ಆ ಮೂಲಕ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಪ್ರತಿಕ್ರಿಯಿಸಿ: feedback@sudha.co.in